# ಯಾವಾಗ ಬಂದ್ಯಪ್ಪ ಮಳೆರಾಯ?

ಮಳೆ ಎಂಬುದು ನಿಸರ್ಗದಲ್ಲಿನ ವಿಸ್ಮಯಗಳಲ್ಲಿ ಒಂದು. ಭೂಮಿಯ ಮೇಲಿನ ಕೆರೆ, ಬಾವಿ, ನದಿ ಸಾಗರಗಳಲ್ಲಿರುವ ನೀರು ಸೂರ್ಯನ ಶಾಖದಿಂದ ಆವಿಯಾಗಿ, ಬಾನಿನಲ್ಲಿ ಮೋಡವಾಗಿ, ಮತ್ತೆ ನೀರಾಗಿ, ಆಕಾಶದ ಅನೂಹ್ಯ ಎತ್ತರದಿಂದ ಭೂಮಿಗೆ ಧಾರೆ ಧಾರೆಯಾಗಿ ಬೀಳುವ ಪ್ರಾಕೃತಿಕ ವ್ಯಾಪಾರ ಅದ್ಭುತವಲ್ಲದೆ ಇನ್ನೇನು? ಈ ಆವರ್ತನ ಕ್ರಿಯೆಯ ಹಿಂದಿರುವ ಚಾಲಕ ಶಕ್ತಿ ಯಾವುದು– ಎಂದು ಯೋಚಿಸಿದಾಗ ಮನಸ್ಸು ಬೆರಗುಗೊಳ್ಳುತ್ತದೆ. ಮಳೆಯಲ್ಲೂ ಅದೆಷ್ಟು ವಿಧ! ತುಂತುರು ಮಳೆ, ಹೂ ಮಳೆ, ಸೋನೆ ಮಳೆ, ಜಡಿಮಳೆ– ಇವೆಲ್ಲವೂ ಕಾರ್ಗಾಲ ವೈಭವದ ವಿವಿಧ ಮುಖಗಳು. ಈ ನೆಲದ ಬದುಕನ್ನು ಸಮೃದ್ಧ, ಸುಂದರಗೊಳಿಸುವ ಮಳೆ ಕೆಲವೊಮ್ಮೆ ತನ್ನ ರುದ್ರ ನರ್ತನದಿಂದ ಅದೇ ಬದುಕನ್ನು ಅಸ್ತವ್ಯಸ್ತಗೊಳಿಸಿ, ಧ್ವಂಸ ಮಾಡುತ್ತದೆ. ತಾಯಿ ಪ್ರಕೃತಿಗೆ ವಾತ್ಸಲ್ಯದ ಜೊತೆಗೆ ಕ್ರೌರ್ಯವೂ ಇದೆಯೆಂಬುದನ್ನು ಮಳೆ ಸಾಬೀತುಪಡಿಸುತ್ತದೆ.

ಮಣ್ಣಿನ ಮಕ್ಕಳಾದ ಹಳ್ಳಿಯ ಜನರ ಪಾಲಿಗೆ ಮಳೆ ಎಂಬುದು ಕೇವಲ ಭೌತಿಕ ಕ್ರಿಯೆಯಲ್ಲ; ದೇವರ ಕೃಪೆಯಿಂದ ಪ್ರಾಪ್ತವಾಗುವಂಥದು. ಸಕಾಲದಲ್ಲಿ ಸಮೃದ್ಧವಾಗಿ ಮಳೆಯಾದರೆ ಭೂಮಿಯನ್ನೇ ನಂಬಿಕೊಂಡ ರೈತರ ಸಂಭ್ರಮಕ್ಕೆ ಪಾರವಿಲ್ಲ. ಆಕಾಶದಲ್ಲಿ ಕಾಣಿಸಿಕೊಂಡ ಕಪ್ಪುಮೋಡ ಧಾರಾಳವಾಗಿ ಮಳೆ ಸುರಿಸುವ ಹಂತದಲ್ಲಿರುವುದನ್ನು ಕಂಡ ಒಬ್ಬ ರೈತ ತನ್ನ ಸ್ನೇಹಿತನನ್ನು ಕೂಗಿ ಕರೆದು– 'ಮೋಡ ನೋಡೋ, ಮೋಡದ ಚೆಂದ ನೋಡೋ! ಗೋಡೆಗೆ ಕಪ್ಪು ಬಳಿದ್ವಾಂಗ– ಮಳೆರಾಯ. ಬೋರಾಡುತಾನೆ ಮುಗಿಲಲ್ಲಿ' ಎಂದು ಹಾಡುತ್ತಾ ಸಂಭ್ರಮಿಸುತ್ತಾನೆ. ಸುರಿಯುತ್ತಿರುವ ಸೋನೆ ಮಳೆಯನ್ನು ಕಂಡ ಇನ್ನೊಬ್ಬ ಜನಪದ ಕವಿ–

'ಮೂಡಲಾಗಿ ಹೊಯ್ಯೋ ಮುತ್ತಿನ ಸೋನೆ ಮಳೆಯೇ
ಎದ್ದು ಮೇಲವನೆ ಭೈರವ! ಬೆಟ್ಟದ ಮೇಲೆ ಜಗ್ಗಿಸಿ ಹೊಯ್ಯೋ ಮಳೆರಾಯಾ' ಎಂದು ಪ್ರಾರ್ಥಿಸುತ್ತಾನೆ. ಬೆಟ್ಟದ ಮೇಲಿನ ಭೈರವ ಎದ್ದಿದ್ದಾನೆ; ಅವನಿಗೆ ಮಜ್ಜನವಾಗಬೇಕಾಗಿದೆ; ಅದಕ್ಕೆ ಮುತ್ತಿನಂಥ ಸೋನೆಮಳೆ ಸಾಲದು. ಧಾರಾಕಾರವಾಗಿ, 'ಜಗ್ಗಿಸಿ' ಸುರಿಯುವ ಮಳೆಯಲ್ಲಿಯೇ ಆತನ ಸ್ನಾನ ಸಾಧ್ಯ. ಇದು ಈ ಪ್ರಾರ್ಥನೆಯ ಹಿಂದಿನ ಕಲ್ಪನಾವಿಲಾಸ. ಬೇಂದ್ರೆಯವರು 'ಗುಡ್ಡ ಗುಡ್ಡ ಸ್ಥಾವರ ಲಿಂಗ! ಅವಕೆ ಅಭ್ಯಂಗ'– ಎಂದು ಶ್ರಾವಣದ ಮಳೆಯ ವೈಭವವನ್ನು ಕುರಿತು ಉದ್ಗರಿಸಿರುವುದು ನೆನಪಾಗುತ್ತದೆಯಲ್ಲವೆ? ರೈತನ ಪ್ರಾರ್ಥನೆ ಮಳೆರಾಯನ ಕಿವಿಗೆ ತಲುಪಿರಬೇಕು. ಆತ ಧಾರಾಕಾರವಾಗಿ ಸುರಿಸಿದ ಮಳೆಯಿಂದ ಬೆಟ್ಟದ ಭೈರವ ಸಂತೃಪ್ತನಾಗುತ್ತಾನೆ. ಭೂಮಿ ಹಸಿರಾಗುತ್ತದೆ; ಹೊಲ ಗದ್ದೆಗಳಲ್ಲಿ ರೈತನ ಶ್ರಮ ಅರಳಿಕೊಳ್ಳುತ್ತದೆ. ಆದರೆ ಕೆಲವು ಬಾರಿ ಮಳೆರಾಯ ಮುನಿಸಿಕೊಳ್ಳುವುದೂ ಉಂಟು. ಆಗ ರೈತ ಆಕಾಶವನ್ನೇ ನೋಡುತ್ತಾ, ಅಸಹಾಯಕತೆಯ ನಿಟ್ಟುಸಿರು ಬಿಡುತ್ತಾ– 'ಯಾತಕ್ಕೆ ಮಳೆ ಹೋದವೋ, ಶಿವ ಶಿವಾ, ಲೋಕ ತಲ್ಲಣಿಸುತಾವೋ' ಎಂದು ಗೋಳಿಡುತ್ತಾನೆ. ಅನಾವೃಷ್ಟಿಯ ಪರಿಣಾಮವಾದ ಬರಗಾಲದ ಭೀಕರ ಸ್ಥಿತಿಯನ್ನು ಒಂದು ಜನಪದ ಗೀತೆ ಹೀಗೆ ವರ್ಣಿಸುತ್ತವೆ;

ಒಕ್ಕಲಗೇರ್ಯಾಗ ಮಳೆರಾಯಾ! ಮಕ್ಕಳ ಮಾರ್‍ಯಾರ ಮಳೆರಾಯಾ!
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು! ಭತ್ತಂತ ತಿರುಗ್ಯಾರು ಮಳೆರಾಯಾ!



ಅತಿವೃಷ್ಟಿಯಿಂದ ಇನ್ನೊಂದು ಬಗೆಯ ಅನಾಹುತ. ಮನೆ ಮರಗಳು ಉರುಳುತ್ತವೆ; ರೈತ ಬೆಳೆದ ಬೆಳೆ ಕೊಚ್ಚಿ ಹೋಗುತ್ತದೆ. ಮಳೆಯ ಗಾಳಿಗಳ ರುದ್ರನರ್ತನದಿಂದಾಗಿ ಜನಜೀವನ ಅಸ್ತವ್ಯಸ್ತಗೊಳ್ಳುತ್ತದೆ. 'ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದವು! ಯಾವಾಗ ಬಂದ್ಯಪ್ಪ ಮಳೆರಾಯಾ?' ಎನ್ನುವಂತಾಗುತ್ತದೆ. 'ಯಾತಕ್ಕೆ ಮಳೆ ಹೋದವೋ' ಎಂದು ಕಳವಳಿಸುತ್ತಿದ್ದ ರೈತ 'ಯಾವಾಗ ಬಂದ್ಯಪ್ಪ ಮಳೆರಾಯಾ?' ಎಂದು ಕೇಳುವಂತಾಗುವುದು ಎಂಥ ವಿಪರ್ಯಾಸ!

■ ವೈನತೇಯ

## ಮಾತೇ ಮುತ್ತು

ಹೆಚ್ಚಿನ ನ್ಯಾಯ ಸಾಧಿಸಲು ಸ್ವಲ್ಪ ಮಟ್ಟಿನ ಅನ್ಯಾಯ ಮಾಡಿ.
–ಶೇಕ್ಸ್‌ಪಿಯರ್

ಕಟ್ಟಕಡೆಯದಾದ ಜನತೆಯ ನ್ಯಾಯದಲ್ಲಿ ತಾಳ್ಮೆಯಿಂದ ವಿಶ್ವಾಸ ಇಡೋಣ.
–ಅಬ್ರಹಾಂ ಲಿಂಕನ್

ಯಾವಾಗ ಯಾವುದು ನೀತಿಯೋ ಅದನ್ನೇ ಅನುಸರಿಸಬೇಕು. ಅದರಿಂದ ನಾವೂ ಲಾಭ ಪಡೆಯಬಹುದು. ಇಲ್ಲದಿದ್ದಲ್ಲಿ ನಾವು ಬರಿ 'ಬಲಿ' ಆಗುತ್ತೇವೆ. ಅಷ್ಟೆ.
–ಅಶ್ವತ್ಥ

ಜನಕ್ಕೆ ತಮ್ಮ ಹಕ್ಕುಗಳ, ತಮ್ಮ ಹೊಣೆಗಾರಿಕೆಯ ಅರಿವು ಇಲ್ಲದೆ ಹೋದರೆ ಪ್ರಜಾಪ್ರಭುತ್ವ ಕೇವಲ ನಕಲಿ ಮಾಲು; ಅಂಥ ಕಡೆ ಪ್ರಜಾಪ್ರಭುತ್ವವನ್ನು ನಾಶ ಮಾಡುವುದು ಲೀಲಾಜಾಲ.
–ಗೋಪಾಲಕೃಷ್ಣ ಅಡಿಗ

ಆಗಾಗ ಸಣ್ಣಪುಟ್ಟ 'ಪ್ರತಿಭಟನೆ'ಗಳಿರುವುದು ಒಳ್ಳೆಯದೇ– ಪ್ರಪಂಚದಲ್ಲಿ ಆಗಾಗ ಬಿರುಗಾಳಿ ಇರುವಂತೆ.
–ಥಾಮಸ್ ಜೆಫರ್‌ಸನ್

ಪರೀಕ್ಷೆಗಾಗಿ ಓದುವುದೆಂದರೆ ಕೂಲಿ ಕೆಲಸ ಮಾಡಿದಂತೆ.
–ವಿ.ಎಂ.ಇನಾಂದಾರ್

ಗುಡಿಗೆ ಬರುವ ಎಡೆ ದೇವರಿಗೆ, ಒಡಲು ತುಂಬುವುದು ಮಾತ್ರ ಪೂಜಾರಿಗೆ.
–ಪಿ.ಬಿ.ಧುತ್ತರಗಿ

ನಂಬಿಕೆ ತನಗೆ ತಾನೇ ಬರುವುದಿಲ್ಲ. ಅದನ್ನು ಪಡೆಯಲು ನಾವೂ ಶ್ರಮ ಪಡಬೇಕು.
–ಐಸಾಕ್ ಬಿ. ಸಿಂಗರ್

ಪಶ್ಚಾತ್ತಾಪ ಅನುಕೂಲ ಇದ್ದಾಗ ನಿದ್ರಿಸುತ್ತದೆ; ಕಷ್ಟ ಬಂದಾಗ ಏಳುತ್ತದೆ.
–ಜೆ.ಜೆ.ರೂಸೋ

ಕೆಲವು ಪುಸ್ತಕಗಳನ್ನು ರುಚಿ ನೋಡಬೇಕು; ಹಲವನ್ನು ಒಮ್ಮೆಲೇ ನುಂಗಬೇಕು; ಎಲ್ಲೋ ಕೆಲವನ್ನು ಅಗಿದು ಜೀರ್ಣಿಸಿಕೊಳ್ಳಬೇಕು.
–ಫ್ರಾನ್ಸಿಸ್ ಬೇಕನ್

ಹೊಸಬನೊಬ್ಬನ ಪರಿಚಯವಾಗದ ದಿನ ವ್ಯರ್ಥವಾದಂತೆ.
–ಡಾ.ಜಾನ್‌ಸನ್

ಬೂಡಸನ್ನು ಕೊಳ್ಳಲು ನಾವು ಹಾತೊರೆಯುತ್ತೇವೆ; ಬುಕ್ಕುಗಳನ್ನು ಕೊಳ್ಳಲು ಏತಕ್ಕೆ ಆತುರ ಪಡುವುದಿಲ್ಲ?
–ಎಸ್.ವಿ.ರಂಗಣ್ಣ

ಪೂಜೆಗಳಲ್ಲಿ ಹಲವು ಬಗೆಗಳುಂಟು. ಅವುಗಳಲ್ಲಿ ಪುಸ್ತಕ ಪೂಜೆಯೂ ಒಂದು.
–ಹಾ.ಮಾ.ನಾಯಕ